# Order Sheet

**In the Court of:Prl. Civil Judge Jr. Dn. and JMFC, GAURIBIDANUR**

CHIKKABALLAPUR

**Filing No. :** O.S./315/2016

**Registration No.:** O.S./315/2016

| Plaintiff | Vs | Defendent |
| --- | --- | --- |
| 1)Aswathappa | | 1)Adinarayanappa & 4 others<br>2)Dasappa<br>3)Eswarappa Alias Chikkappaiah<br>4)Venkatalakshmamma |

Nature of Case: SUIT FOR DECLARATION AND PERMANENT INJUNCTION

Provision of Law: Order 7 Rule 1 of CPC Section26

Advocate For Plaintiff Sri/Smt :CHANDRA SHEKARA

Date of Filing :03-08-2016

Date of Registration :03-08-2016

Relief :

The plaintiff prays that
1. Declare the plaintiff is the absolute owner and he is in peaceful possession and enjoyment over the suit schedule property.
2. Grant a permanent injunction against the defendants and restraining the defendants and their assignees and coolies and power of attorney holders and legal heirs and claiming anybody on behalf of the defendants from interfering with the peaceful possession and enjoyment of the plaintiff over the suit schedule properties and disposes the plaintiffs from the suit schedule properties.
3. For grant of costs and such other reliefs.

Date of Cause of Action :24-06-2016

| Purpose | Mode | Bank Name | Amount |
| --- | --- | --- | --- |
| Receipt No. :777/2016-2017 Date :03-08-2016 | Court Fee on Pl... Cash | KARNTAKA RAJYA KAIGARIKA... | 100.00 |
| Receipt No. :777/2016-2017 Date :03-08-2016 | Process Fee Cash | KARNTAKA RAJYA KAIGARIKA... | 60.00 |

IA 1/2016 Order 39 Rule 1 and 2 CPC Read with Sec.151 of CPC

Relief : It is prayed that to pass a Ad-interim order of temporary injunction against the defendants and restraining the defendants and power of attorney holders from alienate the suit schedule property until pending and disposal of the suit.

CAO/CMO

Registered and Putup/Made Over this case to the ______________ court for disposal according to law.

Prl. Civil Judge Jr. Dn. and JMFC, GAURIBIDANUR
CHIKKABALLAPUR

Sr.No. Date

03-08-2016

1)

**Proceedings**

Sri BL R — power on behalf of D1 & D2 — Sri SDB R — power on behalf of D3 — 12 — ~~Applts~~ Plaintiffs & Defendants are present — R — Jointly Compromise petition U/O 23 Rule 3 of CPC — 12 — Applts — for orders

4 9/8/16

3/8

Case on 17/8/16

9/8

0.S. 315/16



ಪ್ರಕರಣವನ್ನು ಕರೆಸಲಾಯಿತು. ವಾದಿ, ಪ್ರತಿವಾದಿ ಮತ್ತು ಅವರುಗಳ ಪರ ವಕೀಲರು ಹಾಜರು ಇರುತ್ತಾರೆ. ಉಭಯ ಪಕ್ಷಕಾರರು ಜಂಟಿಯಾಗಿ ಕ್ರಮಾದೇಶ ೨೩ ನಿಯಮ ೩ ರಡಿಯಲ್ಲಿ ರಾಜಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಉಭಯಪಕ್ಷಕಾರರ ವಾದ ವಿವಾದವನ್ನು ಕೇಳಲಾಗಿ, ಉಭಯಪಕ್ಷಕಾರರು ದಾವಾ ಸ್ವತ್ತುಗಳಿಗ ಸಂಬಂಧಿಸಿ ತಮ್ಮ ತಮ್ಮಲ್ಲಿಯೇ ಎರಡು ದಾವೆಗಳನ್ನು ಅಂದರೆ ಅ.ದಾ.ಸಂ. 26/2016ನ್ನು ಆದಿನಾರಾಯಣಪ್ಪ ಮತ್ತು ದಾಸಪ್ಪನವರು ಪ್ರತಿವಾದಿಗಳಾದ ಅಶ್ವತ್ಥಪ್ಪ , ವೆಂಕಟಲಕ್ಷ್ಮಮ್ಮ ಮತ್ತು ಈಶ್ವರಪ್ಪನವರ ಮೇಲೆ ಸ.ನಂ. 65/3ರಲ್ಲಿ 0.34 ಗುಂಟೆ ಜಮೀನಿಗೆ ಸಂಬಂಧಿಸಿ ಹಕ್ಕಿನ ಘೋಷಣೆಗಾಗಿ ಸಲ್ಲಿಸಿರುತ್ತಾರೆ. ಅದೇ ರೀತಿ ಅ.ದಾ.ಸಂ. 315/2016ನ್ನು ಅಶ್ವತ್ಥಪ್ಪನವರು ಪ್ರತಿವಾದಿಗಳಾದ ಆದಿನಾರಾಯಣಪ್ಪ , ದಾಸಪ್ಪ , ವೆಂಕಟಲಕ್ಷ್ಮಮ್ಮ ಮತ್ತು ಈಶ್ವರಪ್ಪನವರ ಮೇಲೆ ಸ.ನಂ. 65/1ರಲ್ಲಿ 0.32 ಗುಂಟೆ ಜಮೀನಿಗೆ ಸಂಬಂಧಿಸಿ ಹಕ್ಕಿನ ಘೋಷಣೆಗಾಗಿ ಸಲ್ಲಿಸಿರುತ್ತಾರೆ.

ಮುಂದುವರಿದು ಉಭಯಪಕ್ಷಕಾರರು ತಿಳಿಸುವಂತೆ ಎರಡೂ ಜಮೀನುಗಳನ್ನು ೨ನೇ ಪ್ರತಿವಾದಿಯಾದ ವೆಂಕಟಲಕ್ಷ್ಮಮ್ಮ ಮತ್ತು ಅವರ ತಂದೆಯಾದ ಚಿನ್ನಪ್ಪನವರು ಪ್ರಸ್ತುತ ಎರಡೂ ದಾವೆಯ ವಾದಿಗಳಿಗೆ ನೋಂದಾಯಿತ ಕ್ರಯಪತ್ರಗಳ ಮೂಲಕ ಮಾರಾಟ ಮಾಡಿರುತ್ತಾರೆಂತಲೂ, ಆದರೆ

ಸರ್ವೆ ನಂಬರುಗಳನ್ನು ನಮೂದು ಮಾಡುವ ಸಮಯದಲ್ಲಿ ಅದಲು ಬದಲು ಮಾಡಿ ನಮೂದು ಮಾಡಿರುತ್ತಾರೆಂತಲೂ, ಆದರೆ ವಿಸ್ತೀರ್ಣದಲ್ಲಾಗಲಿ ಮತ್ತು ಚಕ್ಕುಬಂದಿಯಲ್ಲಾಗಲಿ ಯಾವುದೇ ರೀತಿಯ ವ್ಯತ್ಯಾಸ ಇರುವುದಿಲ್ಲವೆಂತಲೂ, ಸದರಿ ಸರ್ವೆ ನಂಬರುಗಳು ಬದಲಾದ ಕಾರಣ ಕಂದಾಯ ದಾಖಲೆಗಳೂ ಸಹಾ ಅದಲುಬದಲಾಗಿ ನಮೂದು ಆಗಿರುತ್ತವೆಂತಲೂ, ಆದರೆ ಕ್ರಯಪತ್ರಗಳಲ್ಲಿ ತೋರಿಸಿದ ಸ್ವತ್ತುಗಳಲ್ಲಿ ಪ್ರಸ್ತುತ ಎರಡೂ ದಾವೆಯ ವಾದಿಗಳು ತಮ್ಮ ತಮ್ಮ ಸ್ವಾಧೀನಾನುಭವದಲ್ಲಿ ಮಾಲೀಕರಾಗಿ ಇರುತ್ತಾರೆಂತಲೂ, ಆದ್ದರಿಂದ ಈ ದಿನ ಉಭಯಪಕ್ಷಕಾರರು ತಮ್ಮ ತಮ್ಮ ಸ್ವಾಧೀನಾನುಭವದಲ್ಲಿರುವ ಜಮೀನಿಗೆ ಸಂಬಂಧಿಸಿ ಅದಲು ಬದಲಾದ ಸರ್ವೆ ನಂಬರುಗಳನ್ನು ಸರಿಪಡಿಸಿಕೊಳ್ಳಲು ಒಪ್ಪಿಕೊಂಡಿರುತ್ತಾರೆಂತಲೂ, ಸದರಿ ಜಮೀನುಗಳಿಗೆ ಪ್ರಸ್ತುತ ಎರಡೂ ದಾವೆಯ ವಾದಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು , ಅಧಿಕಾರ ಮತ್ತು ಹಿತಾಸಕ್ತಿ ಇರುವುದಿಲ್ಲವೆಂತಲೂ, ಆದ್ದರಿಂದ ತಾವು ರಾಜಿ ಅರ್ಜಿಯಲ್ಲಿ ಕೋರಿದಂತೆ ಎರಡೂ ದಾವೆಗಳನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಉಭಯಪಕ್ಷಕಾರರ ವಾದ ವಿವಾದವನ್ನು ಆಲಿಸಿದ ನಂತರ ಮತ್ತು ಕಡತದಲ್ಲಿರುವ ಸ್ವತ್ತುಗಳಿಗ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರ

ಕ್ರಯಪತ್ರಗಳಲ್ಲಿ ಸರ್ವೆ ನಂಬರು ಅದಲು ಬದಲಾಗಿ ನಮೂದು ಆಗಿದ್ದರಿಂದಲೇ ಕಂದಾಯ ದಾಖಲೆಗಳಲ್ಲಿ ತಪ್ಪಾಗಿ ಹೆಸರುಗಳು ನಮೂದು ಆಗಿರುತ್ತವೆ ಎಂಬುದು ಕಂಡುಬಂದಿದ್ದು , ಆದರೆ ಸದರಿ ನೋಂದಾಯಿತ ಕ್ರಯಪತ್ರಗಳಲ್ಲಿ ನಮೂದು ಮಾಡಿದ ಚಕ್ಕುಬಂದಿ ಮತ್ತು ವಿಸ್ತೀರ್ಣಕ್ಕೂ ಮತ್ತು ವಾದಪತ್ರದ ಸ್ವತ್ತುಗಳ ಚಕ್ಕುಬಂದಿ ಮತ್ತು ವಿಸ್ತೀರ್ಣಕ್ಕೂ ಹೊಂದಾಣಿಕೆ ಕಂಡುಬಂದಿದ್ದು , ಕೇವಲ ಕೈತಪ್ಪಿನಿಂದ ಸರ್ವೆನಂಬರುಗಳನ್ನು ತಪ್ಪಾಗಿ ನಮೂದು ಮಾಡಿದ್ದರಿಂದಲೇ ವಾದಿ ಮತ್ತು ಪ್ರತಿವಾದಿಗಳ ಮಧ್ಯ ಈ ವ್ಯಾಜ್ಯಾ ಕಾರಣ ಉಂಟಾಗಿರುವುದು ಕಂಡು ಬಂದಿದ್ದು , ಒಂದು ವೇಳೆ ಈ ಅರ್ಜಿಗಳನ್ನು ಅಂಗೀಕರಿಸಿದಲ್ಲಿ ಮತ್ತು ಎರಡೂ ದಾವೆಗಳನ್ನು ಪಕ್ಷಕಾರರು ಕೋರಿದಂತೆ ಡಿಕ್ರಿ ಮಾಡಿದಲ್ಲಿ ಯಾವುದೇ ಪಕ್ಷಕಾರರಿಗೆ ತೊಂದರೆ ಆಗುವುದಿಲ್ಲ ಎಂಬುದು ಕಂಡುಬಂದಿರುತ್ತದೆ.

ಅದೇ ರೀತಿ ರಾಜಿ ಅರ್ಜಿಯಲ್ಲಿ ತಿಳಿಸಿದ ಪ್ರಕಾರ ಪ್ರಸ್ತುತ ದಾವಾ ಸ್ವತ್ತಿಗೆ ಸಂಬಂಧಿಸಿ ವಾದಿ ಮತ್ತು ಪ್ರತಿವಾದಿಯವರ ನಡುವೆ ಇದ್ದ ತಂಟೆ ತಕರಾರುಗಳು ಬಗೆಹರಿದಿದ್ದು , ಸದರಿ ರಾಜಿ ಅರ್ಜಿಯಲ್ಲಿನ ಎಲ್ಲಾ ಅಂಶಗಳನ್ನು ಉಭಯಪಕ್ಷಕಾರರಿಗೆ ಕನ್ನಡ ಭಾಷ್ಷೆಯಲ್ಲಿ ಓದಿ ತಿಳಿಸಿದ್ದು, ಅದನ್ನು ಅರ್ಥೈಸಿಕೊಂಡು ಒಪ್ಪಿಕೊಂಡಿರುತ್ತಾರೆ.

prl.

no.

9/8

-17/8

S. Ashwathappa
Advocate for plaintiff
C.R. Chamundappa

ಮುಂದುವರಿದು ಸದರಿ ರಾಜಿಗೆ ಯಾವುದೇ ಒತ್ತಡ , ಮೋಸ ಮತ್ತು ಪ್ರೇರಣೆ ಇರುವುದಿಲ್ಲ ಎಂತಲೂ, ಸದರಿ ರಾಜಿಯನ್ನು ಮನಸಾ ಇಚ್ಛಾ ಒಪ್ಪಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಅದೇ ರೀತಿ ಉಭಯಪಕ್ಷಕಾರರ ವಕೀಲರು ಸಹಾ ತಮ್ಮ ಸಮ್ಮತಿಯನ್ನು ಸೂಚಿಸಿರುತ್ತಾರೆ. ಆದ್ದರಿಂದ ಮೇಲೆ ತಿಳಿಸಿದ ಎಲ್ಲಾ ಅಂಶಗಳ ಕಾರಣ ಈ ಕೆಳಗಿನಂತೆ...

## ಆದೇಶ

ಉಭಯಪಕ್ಷಕಾರರು ಜಂಟಿಯಾಗಿ ಕ್ರಮಾದೇಶ 23 ನಿಯಮ 3ರಡಿಯಲ್ಲಿ ಸಲ್ಲಿಸಿದ ರಾಜಿ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಸದರಿ ರಾಜಿ ಅರ್ಜಿಯನ್ವಯ ವಾದಿಯ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ಸದರಿ ರಾಜಿ ಅರ್ಜಿಯನ್ನು ಡಿಕ್ರಿಯ ಒಂದು ಭಾಗವಾಗಿ ಪರಿಗಣಿಸಲು ಸೂಚಿಸಿದೆ.

ಉಭಯಪಕ್ಷಕಾರರು ತಮ್ಮ ತಮ್ಮ ಗುರುತಿನ ಚೀಟಿಯ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

ಸದರಿ ಆದೇಶದಂತೆ ಡಿಕ್ರಿಯನ್ನು ಬರೆಯಲು ಸೂಚಿಸಿದೆ.

(Sd/-) 30/8/16
ಅಸಿನ್ಯಾ.,ಗೌ.ನೂರು.

Identified by my Advocate for D3 & 4.

Decree Signed on 30/8/2016

(Sd/-) 30/8/16
Prl. Civil Judge & JMFC,
Gowribidanur - 561 208.